**ದಿನಾಂಕ: 08-04-2022 ರಂದು ಸಮಯ 11.30 ಗಂಟೆಗೆ ವಾರ್ಡ್ ಸಂಖ್ಯೆ: 156 ಶ್ರೀನಗರಕ್ಕೆ ಸಂಬಂಧಪಟ್ಟಂತೆ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು**

1. ಶ್ರೀ.ಯರಪ್ಪ ರೆಡ್ಡಿ, ನೋಡಲ್ ಅಧಿಕಾರಿಗಳು – ಅಧ್ಯಕ್ಷರು
2. ಶ್ರೀ.ಎಂ.ರಮೇಶ್, ಸಹಾಯಕ ಅಭಿಯಂತರರು – ಸದಸ್ಯ ಕಾರ್ಯದರ್ಶಿ
3. ಶ್ರೀಮತಿ. ಕವಿತಾ (ಹಿ.ಆ.ಪ) – ಸದಸ್ಯರು
4. ಶ್ರೀಮತಿ. ಮೀನ (ಕಿ.ಆ.ಪ) – ಸದಸ್ಯರು
5. ಶ್ರೀ ನಂದನ್ (ಕಂ.ಪ)– ಸದಸ್ಯರು
6. ಶ್ರೀ ಕಾಂತರಾಜು (ಬೀದಿ ದೀಪ ನಿರ್ವಾಹಕರು) – ಸದಸ್ಯರು
7. ಶ್ರೀ. ರಾಮಚಂದ್ರ, ಸಹಾಯಕ ಅಭಿಯಂತರರು, BESCOM.
8. ಶ್ರೀ. ಹರೀಶ್, ಮಾಪನ ಓದುಗರು , BESCOM.
9. ಶ್ರೀ ಸ್ವಾಮಿಗೌಡ, ತೋಟಗಾರಿಕೆ ಇಲಾಖೆ
10. ಶ್ರೀ. ನೇಮಣ್ಣ, ಬಸವನಗುಡಿ ಸಂಚಾರಿ ಪೋಲೀಸ್ ಠಾಣೆ,
11. ಶ್ರೀ. ರವಿಕುಮಾರ್, ಕಾನೂನು ಸುವ್ಯವಸ್ಥೆ, ಹನುಮಂತನಗರ ಪೋಲೀಸ್ ಠಾಣೆ,
12. ಶ್ರೀ. ಮಂಜುನಾಥ್, ಜಲ ಪರಿವೀಕ್ಷಕರು, BWSSB.
13. ಶ್ರೀ. ನಂದಿನಿ, ಸಹಾಯಕ ಅಭಿಯಂತರರು, BWSSB.
14. ಶ್ರೀ.ಗೋಪಾಲ್ ನಾಯ್ಕ್, ವಾರ್ಡ್ ಮಾರ್ಷಲ್.

1) <u>BWSSB ಇಲಾಖೆಗೆ ಸಂಬಂಧಪಟ್ಟ ವಿಷಯಗಳು:</u>

ವೀವರ್ಸ್ ಕಾಲೋನಿ ಭಾಗದಲ್ಲಿ ವಾಲ್ ಮೆನ್‌ಗಳು ಸಾರ್ವಜನಿಕರೊಂದಿಗೆ ಅನುಚಿತವಾಗಿ ವರ್ತಿಸುತ್ತಿರುವ ಬಗ್ಗೆ.
ನರ್ಮದ ನದಿ ರಸ್ತೆಯಲ್ಲಿ ಕೊಳವೆ ಬಸಲಾಯಿಸಲು ಅಗೆದಿರುವ ರಸ್ತೆಯನ್ನು ಸರಿಪಡಿಸುವ ಬಗ್ಗೆ.
ಮ್ಯಾನ್‌ಹೋಲ್ ಮತ್ತು ವಾಲ್ ಚೇಂಬರ್‌ನಿಂದ ತೆಗೆದ ಮಣ್ಣನ್ನು ತಕ್ಷಣ ತೆರವುಗೊಳಿಸುವುದು.
ಕಾಳಪ್ಪ ಬ್ಲಾಕ್ ಕೇಂಬ್ರಿಜ್ ಶಾಲೆ ಸುತ್ತಲಿನ ಭಾಗದಲ್ಲಿ ನೀರಿನ ಪೂರೈಕೆಯನ್ನು ಸರಿಪಡಿಸುವ ಬಗ್ಗೆ.

ಕ್ರಮ : BWSSB ಸಹಾಯಕ ಅಭಿಯಂತರರು ಮೇಲಿನ ದೂರುಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

2) <u>ಕಾಮಗಾರಿ ಇಲಾಖೆ:</u>

ವಾರ್ಡ್ ವ್ಯಾಪ್ತಿಯಲ್ಲಿ ಕಲ್ಲು ಮಣ್ಣು ಮತ್ತು ತೋಳು ಚರಂಡಿಗಳನ್ನು ದೈನಂದಿನ ತೆರವುಗೊಳಿಸುವುದು.
ವಾರ್ಡ್ ವ್ಯಾಪ್ತಿಯಲ್ಲಿ ಸಕಾಲದಲ್ಲಿ ಗುಂಡಿಗಳನ್ನು ಮುಚ್ಚುವುದು
ರಾಘವೇಂದ್ರ ಬ್ಲಾಕ್ 8ನೇ, 9ನೇ ಮತ್ತು 10ನೇ ಅಡ್ಡರಸ್ತೆಯಲ್ಲಿ ರಸ್ತೆ ಚರಂಡಿ ಕಾಮಗಾರಿಯನ್ನು ಮಾಡಬೇಕೆಂಬುದು ಕಾಮಗಾರಿ ಇಲಾಖೆಯ ಗಮನಕ್ಕೆ ತರಲಾಗಿದೆ..
6ನೇ ಮುಖ್ಯರಸ್ತೆ, ಕೃಷ್ಣ ನದಿ ರಸ್ತೆಯಲ್ಲಿ ಹೊಸದಾಗಿ ಬೋರ್‌ವೆಲ್ ಹಾಕಲು ಕೋರಿರುವ ಬಗ್ಗೆ.

ಕ್ರಮ : ಶ್ರೀನಗರ ವಾರ್ಡ್ 156ರ ಸಹಾಯಕ ಅಭಿಯಂತರರು ಮೇಲಿನ ದೂರುಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

3) <u>ಬೀದಿ ದೀಪ ನಿರ್ವಹಣೆ ಕುರಿತು</u>

ವಾರ್ಡ್ ವ್ಯಾಪ್ತಿಯಲ್ಲಿ ಸರಿಯಾಗಿ ಸಮಯ ನಿಗಧಿಪಡಿಸುವುದು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಆಗಿಂದಾಗೆ ಬೀದಿದೀಪಗಳನ್ನು ಪರಿಶೀಲಿಸಿ ಸರಿಪಡಿಸಿಕೊಳ್ಳಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

**ಕ್ರಮ** : ಶ್ರೀನಗರ ವಾರ್ಡ್ 156ರ ಬೀದಿ ದೀಪ ನಿರ್ವಾಹಕರು ಮೇಲಿನ ದೂರುಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

4) <u>COVID–19 ಕಾಯಿಲೆ ಕುರಿತು</u>

COVID–19 ಕಾಯಿಲೆ ಕುರಿತು COWIN–19 ಲಸಿಕೆಯನ್ನು ಸರ್ಕಾರದ ವತಿಯಿಂದ ಬಿಡುಗಡೆ ಮಾಡಿದ್ದು ಸಾರ್ವಜನಿಕರ ಹಿತದೃಷ್ಟಿಯಿಂದ ವಾರ್ಡ್‌ನ ನಾಗರೀಕರಿಗೆ ಸದರಿ ಲಸಿಕೆಯ ಕುರಿತು ಜಾಗ್ರತೆ ಮೂಡಿಸಲು ಕ್ರಮಕೈಗೊಳ್ಳಲು ಹಾಗೂ ಮಾಸ್ಕನ್ನು ಧರಿಸುವುದರ ಬಗ್ಗೆ ಸಾರ್ವಜನೀಕರಲ್ಲಿ ಜಾಗೃತೆ ಮೂಡಿಸಲು ಕ್ರಮಕೈಗೊಳ್ಳಲು ನೋಡಲ್‌ಅಧಿಕಾರಿಗಳು ಸೂಚಿಸಿದರು.

5) <u>ಕಂದಾಯ ಇಲಾಖೆ:</u>

ಶ್ರೀನಗರ ವಾರ್ಡ್‌ನಲ್ಲಿ ಬಿಬಿಎಂಪಿಯ ಹಿತದೃಷ್ಟಿಯಿಂದ ನಿಗಧಿತ ಸಮಯದಲ್ಲಿ ಕಂದಾಯ ವಸೂಲಿ ಮಾಡಲು ಕ್ರಮಕೈಗೊಳ್ಳಲು ಹಾಜರಿದ್ದ ಕಂದಾಯ ಅಧಿಕಾರಿಯವರಿಗೆ ನೋಡಲ್ ಅಧಿಕಾರಿಯವರು ಸೂಚಿಸಿದರು.

**ಕ್ರಮ** : ಶ್ರೀನಗರ ವಾರ್ಡ್ 156ರ ಹಿರಿಯ ಆರೋಗ್ಯ ಪರಿವೀಕ್ಷಕರು ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

6) <u>ಆರೋಗ್ಯ ಇಲಾಖೆ:</u>

ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗಳಿಗೆ ಸರಿಯಾದ ಸಮಯಕ್ಕೆ ಕಸದ ಗಾಡಿ ಬರುತಿಲ್ಲದರ ಬಗ್ಗೆ ಪರಿಶೀಲಿಸಿ ಸರಿಪಡಿಸುವುದು.

ವಾರ್ಡ್ ವ್ಯಾಪ್ತಿಯಲ್ಲಿ ಎಲೆ ಗುಡ್ಡೆಗಳನ್ನು ತೆರವುಗೊಳಿಸುವ ಬಗ್ಗೆ

ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲೆಂದರಲ್ಲಿ ಕಸ ಹಾಕದಂತೆ ನಿಗಾವಹಿಸಲು ಮಾರ್ಷಲ್‌ಗಳಿಗೆ ಸೂಚಿಸಲಾಗಿದೆ.

**ಕ್ರಮ** : ಶ್ರೀನಗರ ವಾರ್ಡ್ 156ರ ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ವಾರ್ಡ್ ಮಾರ್ಷಲ್ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

7) BESCOM ಇಲಾಖೆ:

ಟ್ರಾನ್ಸ್ ಫಾರ್ಮರ್ ಬಳಿ ಇರುವ ಕಸ ಮತ್ತು ಮಣ್ಣನ್ನು ತರವುಗೊಳಿಸಲು ಕ್ರಮ ಕೈಗೊಳ್ಳುವುದು.

ರಾಘವೇಂದ್ರ ಬ್ಲಾಕ್ 12ನೇ ಮುಖ್ಯರಸ್ತೆ ಅಗೆದಿರುವ ರಸ್ತೆಯನ್ನು ಸರಿಪಡಿಸಲು ಕ್ರಮ ಕೈಗೊಳ್ಳುವುದು.

ಕ್ರಮ : BESCOM ಸಹಾಯಕ ಅಭಿಯಂತರರು ಮೇಲಿನ ದೂರುಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

ವಾರ್ಡ್ ಕಮಿಟಿ ಸಭೆಯಲ್ಲಿ ಉಪಸ್ಥಿತರಿರುವ ಅಧಿಕಾರಿ ವರ್ಗದವರಿಗೆ, ವಾರ್ಡ್ ಕಮಿಟಿ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ಪ್ರತಿ ತಿಂಗಳ ಮೊದಲನೆಯ ಮತ್ತು ಮೂರನೇ ಶನಿವಾರದಂದು ವಾರ್ಡ್ ಕಮಿಟಿ ಸಭೆಯನ್ನು ಏರ್ಪಡಿಸಲಾಗುವುದು ಎಂದು ತಿಳಿಸುತ್ತಾ, ವಂದನಾರ್ಪಣೆ ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

08/04/2022

ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ ಸಂಖ್ಯೆ-156 ಶ್ರೀನಗರ

ಅಧ್ಯಕ್ಷರು, ವಾರ್ಡ್ ಸಮಿತಿ
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡಸಂಖ್ಯೆ-156 ಶ್ರೀನಗರ

ಪ್ರತಿಯನ್ನು,

1) ಜಂಟಿ ಆಯುಕ್ತರು (ದಕ್ಷಿಣ) ರವರಿಗೆ ಮಾಹಿತಿಗಾಗಿ.
2) ಕೌನ್ಸಿಲ್ ಕಾರ್ಯದರ್ಶಿ ರವರಿಗೆ ಮಾಹಿತಿಗಾಗಿ.
3) ಮುಖ್ಯ ಅಭಿಯಂತರರು(ದ) ರವರಿಗೆ ಮಾಹಿತಿಗಾಗಿ.
4) ಉಪ ಆಯುಕ್ತರು(ದ) ರವರಿಗೆ ಮಾಹಿತಿಗಾಗಿ.
5) ಅಧೀಕ್ಷಕ ಅಭಿಯಂತರರು(ದ) ರವರಿಗೆ ಮಾಹಿತಿಗಾಗಿ.
6) ಕಾರ್ಯಪಾಲಕ ಅಭಿಯಂತರರು ರವರಿಗೆ ಮಾಹಿತಿಗಾಗಿ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ಉಪವಿಭಾಗ, ಬಿ.ಬಿ.ಎಂ.ಪಿ ರವರಿಗೆ ಮಾಹಿತಿಗಾಗಿ.
8) ಕಛೇರಿ ಕಡತಕ್ಕೆ.